## ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ, ಹುಬ್ಬಳ್ಳಿ.

**C.C. 1634-22**

ಪಿ.ಡಬ್ಲ್ಯು-11
ಸಿ.ಡಬ್ಲ್ಯು-22

ಸಾಕ್ಷಿದಾರರ ಹೆಸರು : ರಜನೀಶ್ ಗಂಜಾಳ
ತಂದೆ ಹೆಸರು : ಮಹಾಮಲ್ಲಪ್ಪ
ವಯಸ್ಸು : 45 ವರ್ಷ
ಉದ್ಯೋಗ : ಐ ಟಿ ಫರ್ಮ
ವಾಸಸ್ಥಳ : ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 15.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು Grinity Technology and Software Solutions ದಲ್ಲಿ ಮ್ಯಾನೇಜಿಂಗ್ ಡೈರೆಕ್ಟರನಾಗಿದ್ದೇನೆ. ನಾವು ಹುಬ್ಬಳ್ಳಿ ನಗರದಲ್ಲಿ ಪೋಲಿಸ ಇಲಾಖೆಯ ವತಿಯಿಂದ ಅಳವಡಿಸಿದ ಸಿ ಸಿ ಟಿವಿಗಳ ಕಾರ್ಯಕ್ಷಮತೆಯ ಉಸ್ತುವಾರಿಯನ್ನು ನೋಡಿಕೊಳ್ಳುತ್ತೇನೆ.

ದಿಃ 22.2.2022 ರ ಸಾಯಂಕಾಲ 6.50 ರಿಂದ 7.30 ವರೆಗಿನ ಅವಧಿಯಲ್ಲಿಯ ಹುಬ್ಬಳ್ಳಿ ಸರ್ವೋದಯ ಸರ್ಕಲ್ ಹತ್ತಿರ ಮತ್ತು ಕುಸುಗಲ್ ರೋಡ ಆಕ್ಸಫರ್ಡ ಕಾಲೇಜ್ ಬಳಿ ಇರುವ ಸಿ ಸಿ ಟಿವಿಗಳ ದೃಶ್ಯಾವಳಿಗಳನ್ನು ಒಂದು ಸಿ ಡಿ ಮಾಡಿಕೊಡುವಂತೆ ನನಗೆ ಪೋಲಿಸ ಇನ್ಸಪೆಕ್ಟರ ಇವರು ವಿನಂತಿಸಿಕೊಂಡಿದ್ದರು. ಅದರಂತೆ ಆ ದೃಶ್ಯಾವಳಿಗಳನ್ನು ನಾನು ಪಡೆದು, ಸಿ ಡಿ ರೂಪದಲ್ಲಿ ಕೊಟ್ಟಿದ್ದೇನೆ. ಆ ದೃಶ್ಯಾವಳಿಗಳಲ್ಲಿ ವಾಹನಗಳ ಓಡಾಟ ಕಂಡುಬಂದಿರುತ್ತದೆ. ಈಗ ಆ ಸಿ ಸಿ ಟಿವಿ ದೃಶ್ಯಾವಳಿಗಳ ಸಿ ಡಿ ನೋಡುತ್ತಿದ್ದು, ಅದನ್ನು ನಿಪಿ.22 ಎಂದು ಗುರುತಿಸಲಾಯಿತು. ನಾನು ಆ ಸಿ ಡಿ ಕೊಟ್ಟ ಬಗ್ಗೆ ಭಾರತೀಯ ಸಾಕ್ಷ್ಯ ಅಧಿನಿಯಮ-65 ಬಿ ರಡಿಯಲ್ಲಿ ಪ್ರಮಾಣ ಪತ್ರ ಕೊಟ್ಟಿದ್ದೇನೆ, ಈಗ ಆ ಪ್ರಮಾಣ ಪತ್ರವನ್ನು ನಿಪಿ.23 ಎಂದು, ಸಾಕ್ಷಿ ಸಹಿಯನ್ನು ನಿಪಿ.23-(ಎ) ಎಂದು ಗುರುತಿಸಲಾಗಿದೆ.

(ನಿಪಿ.22 ಸಿ ಡಿ ಯನ್ನು ಎ ಪಿ ಪಿ ರವರು ಅವರ ಲ್ಯಾಪ್ ಟ್ಯಾಪ್ ಮುಖಾಂತರ ಪ್ಲೇ ಮಾಡಲು ಪ್ರಯತ್ನಪಟ್ಟರು, ಆದರೆ ಸಿ ಡಿ ಪ್ಲೇ ಆಗಿರುವುದಿಲ್ಲ.)

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನಾವು ಸಿ ಸಿ ಟಿವಿ ನಿರ್ವಹಣೆ ಮಾಡುತ್ತೇವೆ ಎಂದು ತೋರಿಸಲು ನಮ್ಮ Work order ದಾಖಲೆಗಳನ್ನು ಪೋಲಿಸರಿಗೆ ಕೊಟ್ಟಿಲ್ಲ ಅಂದರೆ ಸರಿ. ಪೋಲಿಸ ಇನ್ಸಪೆಕ್ಟರವರು ಸಿ ಸಿ ಟಿವಿ ಫೂಟೇಜ್ ಕೊಡುವಂತೆ ನನಗೆ ಲಿಖಿತವಾಗಿ ಕೊಟ್ಟಿಲ್ಲ ಅಂದರೆ ಸರಿ, ಆದರೆ ಮೌಖಿಕವಾಗಿ ಕೇಳಿಕೊಂಡಿದ್ದರು. ಸರ್ವೋದಯ ಸರ್ಕಲ್ ಮೇಲೆ ಅಪಘಾತವಾದ ದಿನಾಂಕದಂದು 7 ಸಿ ಸಿ ಟಿವಿ ಕ್ಯಾಮರಾಗಳನ್ನು ಅಳವಡಿಸಲಾಗಿತ್ತು. ಅದೇ ರೀತಿ ಕುಸುಗಲ್ ರೋಡ ಮೇಲೆ ಒಂದು Entry and exist ಒಟ್ಟು ಎರಡು ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಸಿ ಸಿ ಟಿವಿ ದೃಶ್ಯಾವಳಿಗಳನ್ನು ಹಾರ್ಡ ಡಿಸ್ಕದಿಂದ ಪೆನ್ ಡ್ರೈವ್ ಗೆ ಕಾಪಿ ಮಾಡಿ ತದನಂತರ ಪೆನ್ ಡ್ರೈವ್ ದಿಂದ ಲ್ಯಾಪ್ ಟಾಪ್ ಮುಖಾಂತರ ಸಿ ಡಿ ಮಾಡಿದ್ದೇವೆ. ಅದನ್ನು ನಮ್ಮ ಟೆಕ್ನಿಶಿಯನ್ ಮಾಡಿದ್ದಾರೆ. ಆದರೆ ನಾನು ಆ ಕೆಲಸ ಮಾಡಿಲ್ಲ. ಪ್ರತಿಯೊಂದು ಕ್ಯಾಮರಾಗೆ ಐ ಪಿ ಅಡ್ರೆಸ್ ಇರುತ್ತದೆ. ನಾನು ಯಾವ ದಿನಾಂಕದಂದು ಸಿ ಸಿ ಟಿವಿ ಫೂಟೇಜ್ ಕೊಟ್ಟಿದ್ದೇನೆಂದು ಅಂದರೆ ನಿಪಿ.23 ರಲ್ಲಿ ಬರೆದಿಲ್ಲ ಅಂದರೆ ಸರಿ. ಹಾರ್ಡ ಡಿಸ್ಕದಿಂದ ಯಾವ ಪೆನ್ ಡ್ರೈವ್ ದಲ್ಲಿ ದೃಶ್ಯಾವಳಿಗಳನ್ನು ಕಾಪಿ ಮಾಡಿದ ಬಗ್ಗೆ ನನ್ನ ಪ್ರಮಾಣ ಪತ್ರದಲ್ಲಿ ಬರೆದಿಲ್ಲ ಅಂದರೆ ಸರಿ. ಆ ಪೆನ್ ಡ್ರೈಮ್ ಮತ್ತು ಲ್ಯಾಪ ಟಾಪ್ ಹಾಜರಪಡಿಸಿಲ್ಲ ಅಂದರೆ ಸರಿ. ನಿಪಿ.23 ಪೋಲಿಸರು ತಯಾರಿ ಮಾಡಿಕೊಂಡು ಬಂದ್ದಿದ್ದರು, ನಾನು ಅದಕ್ಕೆ ಸಹಿ ಮಾಡಿದ್ದೇನೆ. ಅದನ್ನು ನಾನು ಸ್ವತಹ ತಯಾರಿ ಮಾಡಿಲ್ಲ ಅಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸಿ ಸಿ ಟಿವಿ ಫೂಟೇಜ್ ಕೊಟ್ಟೆ ಇಲ್ಲ ಅಂದರೆ ಸರಿಯಲ್ಲ. ನನಗೆ ನಿಪಿ.23 ನ್ನು ಕೊಡುವ ಅಧಿಕಾರವಿಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಹುಬ್ಬಳ್ಳಿ.